# ಫೋಗಟ್ ಪದಕದ ಕನಸು

ಫೋಗಟ್ ಎನ್ನುವ 'ಸರ್‌ನೇಮ್' ಈಗ ಭಾರತೀಯ ಕುಸ್ತಿ ಕಣದಲ್ಲಿ ಅತ್ಯಂತ ಜನಪ್ರಿಯ. ಫೋಗಟ್ ಕುಟುಂಬದ ಕುಡಿ ವಿನೇಶ್ ಫೋಗಟ್ ಕಳೆದ ವಾರ ಮಹಿಳೆಯರ ವಿಶ್ವ ಕುಸ್ತಿ ಚಾಂಪಿಯನ್‌ನಲ್ಲಿ ಕಂಚಿನ ಪದಕ ಗೆದ್ದು ಭಾರತದ ಕೀರ್ತಿಪತಾಕೆಯನ್ನು ಇನ್ನಷ್ಟು ಎತ್ತರಕ್ಕೆ ಏರಿಸಿದ್ದಾಳೆ. ಮಾತ್ರವಲ್ಲ, 2020ರಲ್ಲಿ ಟೋಕಿಯೋದಲ್ಲಿ ನಡೆಯಲಿರುವ ಒಲಿಂಪಿಕ್ಸ್ ಸ್ಪರ್ಧೆಗೆ ಪ್ರವೇಶ ಪಡೆದ ಭಾರತದ ಮೊದಲ ಕುಸ್ತಿಪಟು ಎಂಬ ಹೆಗ್ಗಳಿಕೆಗೆ ಪಾತ್ರಳಾಗಿದ್ದಾಳೆ. 53 ಕೆ.ಜಿ. ದೇಹತೂಕ ವಿಭಾಗಕ್ಕೆ ತನ್ನ ಸ್ಪರ್ಧೆಯನ್ನು ಬದಲಾಯಿಸಿಕೊಂಡ ಬಳಿಕ ಕೇವಲ ಹತ್ತೇ ತಿಂಗಳಲ್ಲಿ ಈ ವಿಭಾಗದಲ್ಲಿ ವಿಶ್ವಮಟ್ಟದ ಪದಕವೊಂದನ್ನು ಗೆದ್ದದ್ದು ನಿಜಕ್ಕೂ ಅಭೂತಪೂರ್ವ ಸಾಧನೆ. ಈಗ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಚಿನ್ನದ ಪದಕವೊಂದನ್ನು ಗೆಲ್ಲುವ ಆಕೆಯ ಕನಸಿಗೆ ಮತ್ತೆ ರೆಕ್ಕೆ ಬಂದಿದೆ. 'ರಿಯೊ ಒಲಿಂಪಿಕ್ಸ್‌ನಲ್ಲಿ ಮಂಡಿಯ ಮೂಳೆ ಸ್ಥಳಾಂತರದಿಂದಾಗಿ ನನ್ನ ಕನಸು ಕನಸಾಗಿಯೇ ಉಳಿದಿತ್ತು. ಈಗ ಮತ್ತೆ ಕನಸು ಚಿಗುರಿದೆ' ಎಂದಿದ್ದಾಳೆ ವಿನೇಶ್ ಹೆಮ್ಮೆಯಿಂದ.



ಅಮೀರ್ ಖಾನ್‌ನ ಸೂಪರ್‌ಹಿಟ್ ಸಿನಿಮಾ 'ದಂಗಲ್' ನೋಡಿದವರೆಲ್ಲರಿಗೂ ಮಹಾವೀರ್ ಫೋಗಟ್ ಎನ್ನುವ ಹೆಸರು ಗೊತ್ತೇ ಇದೆ. ತನ್ನ ಇಬ್ಬರು ಹೆಣ್ಣುಮಕ್ಕಳನ್ನು ಕುಸ್ತಿಯ ಕಣಕ್ಕಿಳಿಸಿ ಊರವರ ಪ್ರತಿರೋಧ, ಲೇವಡಿಯ ನಡುವೆಯೂ ತಾನೇ ತರಬೇತಿ ನೀಡಿ ಭಾರತಕ್ಕೆ ಎರಡು ಚಿನ್ನದ ಪದಕಗಳನ್ನು ಗೆಲ್ಲಿಸಿಕೊಟ್ಟ ಧೀರ ಕುಸ್ತಿಪಟು ಮಹಾವೀರ್. ಈತನ ನಿಜಜೀವನದ ಪಾತ್ರವನ್ನೇ ದಂಗಲ್ ಸಿನಿಮಾದಲ್ಲಿ ಅಮೀರ್ ಖಾನ್ ನಟಿಸಿದ್ದು. ಮಹಾವೀರ್ ಫೋಗಟ್‌ನ ಮಕ್ಕಳಾದ ಗೀತಾ ಫೋಗಟ್ ಮತ್ತು ಬಬಿತಾ ಕುಮಾರಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಚಿನ್ನ ಗೆದ್ದ ಇಬ್ಬರು ಸೋದರಿಯರು. ಈ ಮಹಾವೀರ್ ಫೋಗಟ್‌ನ ಕಿರಿಯ ಸೋದರ ರಾಜಪಾಲ್ ಫೋಗಟ್‌ನ ಮಗಳೇ ವಿನೇಶ್. ತನ್ನ ಕಸಿನ್ಸ್ ಇಬ್ಬರೂ ಚಿನ್ನ ಗೆದ್ದ ಸಂಭ್ರಮವನ್ನು ನೋಡುತ್ತಲೇ ತಾನೂ ಕುಸ್ತಿಕಣಕ್ಕೆ ಇಳಿದವಳು ವಿನೇಶ್. ಈಕೆಯ ಇನ್ನೊಬ್ಬ ಕಸಿನ್ ರಿತು ಫೋಗಟ್ ಕೂಡಾ 2016ರ ಕಾಮನ್‌ವೆಲ್ತ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಳು. ಒಟ್ಟಾರೆ ಫೋಗಟ್ ಕುಟುಂಬ ಭಾರತದ ಕುಸ್ತಿಕಣದ ಹೆಮ್ಮೆ.

ವಿನೇಶ್‌ಗೆ ನೇರ ಸ್ಫೂರ್ತಿ ಗೀತಾ ಫೋಗಟ್. ಆಕೆ ಭಾರತದ ಮಟ್ಟಿಗೆ ಹಲವು ಪ್ರಥಮಗಳನ್ನು ದಾಖಲಿಸಿದ ಮೊದಲ ಮಹಿಳಾ ಕುಸ್ತಿಪಟು. 2010ರಲ್ಲಿ ದೆಹಲಿಯಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಗೀತಾ, ಭಾರತಕ್ಕೆ ಅಂತರರಾಷ್ಟ್ರೀಯ ಕುಸ್ತಿ ಕೂಟವೊಂದರಲ್ಲಿ ಪದಕ ದೊರಕಿಸಿದ ಮೊತ್ತ ಮೊದಲ ಮಹಿಳೆ. ಒಲಿಂಪಿಕ್ಸ್ ಕುಸ್ತಿಗೆ ಅರ್ಹತೆ ಪಡೆದ ಭಾರತದ ಮೊದಲ ಮಹಿಳೆಯೂ ಈಕೆಯೇ. ಈಕೆಯ ತಂಗಿ ಬಬಿತಾ 2014ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದಳು. 2012ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲೂ ಈಕೆಗೆ ಚಿನ್ನದ ಪದಕ ಸಿಕ್ಕಿತ್ತು. ಈಗ ವಿನೇಶ್ ಸರದಿ.

ವಿನೇಶ್ ಮೊದಲು ಸುದ್ದಿ ಮಾಡಿದ್ದು 2014ರ ಗ್ಲಾಸ್ಗೋ ಕಾಮನ್‌ವೆಲ್ತ್ ಕೂಟದಲ್ಲಿ. ಆಗ ಈಕೆಗೆ 21ರ ಹರೆಯ. 48 ಕೆಜಿ ಫ್ರೀಸ್ಟೈಲ್ ವಿಭಾಗದಲ್ಲಿ ಚಿನ್ನ ಗೆದ್ದ ವಿನೇಶ್, ಮುಂದಿನ ವರ್ಷ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಳು. ಹಾಗೆ ಕಾಮನ್‌ವೆಲ್ತ್ ಮತ್ತು ಏಷ್ಯನ್ ಕೂಟ ಎರಡರಲ್ಲೂ ಚಿನ್ನ ಗೆದ್ದ ಭಾರತದ ಏಕೈಕ ಕುಸ್ತಿಪಟು ಎಂಬ ಕೀರ್ತಿ ವಿನೇಶ್‌ಳದ್ದು. ಬಳಿಕ ಇಸ್ತಾಂಬುಲ್‌ನಲ್ಲಿ ನಡೆದ ಅರ್ಹತಾ ಟೂರ್ನಿಯಲ್ಲಿ ಗೆದ್ದು 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಅವಕಾಶ ಪಡೆದಳು.

ರಿಯೊ ಒಲಿಂಪಿಕ್ಸ್‌ನಲ್ಲಿ 50 ಕೆ.ಜಿ. ತೂಕವಿಭಾಗದ ಫ್ರೀಸ್ಟೈಲ್ ಕುಸ್ತಿಯ ಕಣದಲ್ಲಿ ಪದಕ ನಿರೀಕ್ಷೆಯೊಂದಿಗೆ ಕಣಕ್ಕಿಳಿದಿದ್ದ ವಿನೇಶ್, ಮೊಣಕಾಲಿನ ಮೂಳೆ ಸ್ಥಳಾಂತರಗೊಂಡು ಕಣದಲ್ಲೇ ಕುಸಿದು ಕುಳಿತಿದ್ದಳು. ಸ್ಟ್ರೆಚರ್‌ನಲ್ಲಿ ಆಕೆಯನ್ನು ಎತ್ತಿಕೊಂಡು ಆಸ್ಪತ್ರೆಗೆ ಕರೆದೊಯ್ದಾಗ ಎಲ್ಲರೂ ಈಕೆಯ ಕುಸ್ತಿಯ ಕಥೆ ಮುಗಿಯಿತು ಎಂದೇ ಅಂದುಕೊಂಡಿದ್ದರು. ಆದರೆ ಗಾಯದ ಜೊತೆಗೆ ಒಂದು ವರ್ಷ ಸೆಣಸಾಡಿ ಮರಳಿ ಬಂದ ಈಕೆ, ಬಳಿಕ ನಡೆದ ಗೋಲ್ಡ್‌ಕೋಸ್ಟ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದಳು. ಮರುವರ್ಷ ಜಕಾರ್ತಾ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದಳು. ಹೀಗೆ ಗಾಯಗೊಂಡು ವರ್ಷದ ರಜೆಯ ಬಳಿಕ ಮತ್ತೆ ಕಣಕ್ಕೆ ಇಳಿದು ಚಿನ್ನ ಗೆಲ್ಲುವುದು ಸುಲಭವಲ್ಲ. ಇಂತಹ ಸಾಧನೆಯನ್ನು ಗಾಲ್ಫ್ ಕ್ರೀಡೆಯಲ್ಲಿ ಮಾಡಿದಾತ ವಿಶ್ವವಿಖ್ಯಾತ ಅಥ್ಲೀಟ್ ಟೈಗರ್‌ವುಡ್. ಹೀಗೆ ಮರಳಿಬಂದು ವಿಶ್ವದಲ್ಲಿ ಅಗ್ರಸ್ಥಾನ ಪಡೆದವರ ಸಾಧನೆಯನ್ನು ಗುರುತಿಸಲೆಂದೇ ಪ್ರತಿಷ್ಠಿತ ಲಾರೆಸ್ ವರ್ಲ್ಡ್ ಕ್ರೀಡಾ ಪ್ರಶಸ್ತಿ ಇದೆ. ಆ ಪ್ರಶಸ್ತಿಗೆ ಟೈಗರ್‌ವುಡ್ ಜೊತೆಗೆ ನಾಮಕರಣಗೊಂಡ ಭಾರತದ ಮೊದಲ ಮಹಿಳೆ ವಿನೇಶ್.

ಆಗಸ್ಟ್ 26ರಂದು ಹುಟ್ಟಿದ ವಿನೇಶ್‌ಗೆ ಈಗ 25ರ ಹರೆಯ. ಒಲಿಂಪಿಕ್ಸ್ ಚಿನ್ನ ಗೆಲ್ಲಲು 26 ಪ್ರಶಸ್ತ ಹರೆಯ. ಕಳೆದ ವರ್ಷ ಡಿಸೆಂಬರ್‌ನಲ್ಲಿ ವಿನೇಶ್ ತನ್ನ ಬಾಯ್‌ಫ್ರೆಂಡ್ ಸೋಮ್‌ವೀರ್ ರಥಿಯನ್ನು ಮದುವೆ ಮಾಡಿಕೊಂಡಳು. ಆತನೂ ಕುಸ್ತಿ ಪಟುವೇ. ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಎರಡು ಸಲ ಚಿನ್ನದ ಪದಕ ಗೆದ್ದಾತ. 2011ರಲ್ಲೇ ಇವರಿಬ್ಬರ ಮಧ್ಯೆ ಪ್ರೀತಿ ಬೆಳೆದಿತ್ತು. ಅದಕ್ಕೆ ಕಾರಣ ಇಬ್ಬರೂ ರೈಲ್ವೇಸ್‌ನಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿರುವುದು.

2016ರಲ್ಲೇ ಪ್ರತಿಷ್ಠಿತ ಅರ್ಜುನ ಪ್ರಶಸ್ತಿಯನ್ನು ಗೆದ್ದಿರುವ ವಿನೇಶ್ ಹೆಸರನ್ನು ಕಳೆದ ವರ್ಷ ಭಾರತೀಯ ಕ್ರೀಡಾ ಪ್ರಾಧಿಕಾರವು ಪದ್ಮಶ್ರೀ ಪ್ರಶಸ್ತಿಗೆ ಶಿಫಾರಸ್ಸು ಮಾಡಿತ್ತು. ಈಗ ಸ್ವಂತ ಪರಿಶ್ರಮದಿಂದ ವಿನೇಶ್ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾಳೆ. ಪದಕದ ಕನಸು ನನಸಾಗಲು ಹೆಚ್ಚು ಸಮಯವೇನಿಲ್ಲ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65